ಆ) ೨೦೦೪-೦೫ ನೇ ಸಾಲಿಗೆ ನಿಗದಿಪಡಿಸಲಾದ ಕಟ್ಟಡಗಳ ಭೌತಿಕ ಗುರಿ ಮತ್ತು ಪ್ರಗತಿಯ ವಿವರಗಳೇನು;

ಇ) ಚಿಕ್ಕಮಕ್ಕಳ ಅನುಕೂಲಕ್ಕಾಗಿ ಸ್ವಂತ ಮತ್ತು ಸುವ್ಯವಸ್ಥಿತ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ಆದ್ಯತೆಯ ಮೇರೆಗೆ ಕ್ರಮ ಜರುಗಿಸುವುದೇ?

ಶ್ರೀಮತಿ ಭಾಗೀರಥಿ ಮರಳಸಿದ್ಧನ ಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಬೆಳ್ತಂಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ೧೯೩ ಅಂಗನವಾಡಿ ಕೇಂದ್ರಗಳು ಇದ್ದು ಈ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುತ್ತದೆ.

ಆ) ಎಲ್ಲಾ ೧೯೩ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುವ ಕಾರಣ ಭೌತಿಕ ಗುರಿ ನಿಗದಿಪಡಿಸುವ ಪ್ರಶ್ನೆ ಉದ್ಭವಿಸುವಿದಿಲ್ಲ,

ಇ) ಎಲ್ಲಾ ೧೯೩ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುವುದರಿಂದ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ಆದ್ಯತೆ ಮೇರೆಗೆ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

೪೦೦೮ (೪೮೬೩) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ವಲಯದ ಸಕ್ಕರೆ ಕಾರ್ಖಾನೆಗಳ ಪುನಃಶ್ಚೇತನಕ್ಕಾಗಿ ಸರಕಾರ ಕೈಗೊಂಡ ಕ್ರಮಗಳೇನು;

ಆ) ಪುನಃಶ್ಚೇತನದ ದಿಶೆಯಲ್ಲಿ ವಿ.ಎಸ್. ಕೌಜಲಗಿಯವರು ನೀಡಿದ ವರದಿಯ ಮಾರ್ಗದರ್ಶಿ ಸೂಚನೆಗಳು ಯಾವುವು;

ಇ) ನಷ್ಟವನ್ನು ಅನುಭವಿಸುತ್ತಿರುವ ಸಕ್ಕರೆ ಕಾರ್ಖಾನೆಗಳು ಯಾವುವು;

ಈ) ಸದರಿ ಕಾರ್ಖಾನೆಗಳನ್ನು ಮುಂದುವರಿಸಲು ಸರಕಾರ ಕ್ರಮ ಕೈಗೊಳ್ಳುವುದೇ; (ನಷ್ಟದ ವಿವರ ನೀಡುವುದು)?

ಶ್ರೀ ಆರ್.ವಿ ದೇಶಪಾಂಡೆ (ಸಹಕಾರ ಸಚಿವರು) :

ಅ) ಸಕ್ಕರೆ ಉದ್ಯಮದ ಪುನಃಶ್ಚೇತನದ ಸಂಬಂಧ ರಾಜ್ಯ ಸರ್ಕಾರವು ಆಗಿನ ಕೃಷಿ ಮಂತ್ರಿಗಳಾದ ಮಾನ್ಯ ಶ್ರೀ. ವಿ.ಎಸ್. ಕೌಜಲಗಿರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ

ಸಂಪುಟ ಉಪಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಸಮಿತಿಯು ಮಾಡಿರುವ ಶಿಫಾರಸ್ಸುಗಳು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿರುತ್ತವೆ. ಕಾರ್ಖಾನೆಗಳ ಪುನಃಶ್ಚೇತನಕ್ಕೆ ಕ್ರಮ ಕೈಗೊಳ್ಳಲಾಗುವುದು. ಹಾಗೆಯೇ ಕೇಂದ್ರ ಸರ್ಕಾರವು ಸಕ್ಕರೆ ಉದ್ಯಮದ ಪುನಃಶ್ಚೇತನಕ್ಕಾಗಿ ಕೇಂದ್ರದ ನಾಗರೀಕ ಮತ್ತು ಆಹಾರ ಕಾರ್ಯದರ್ಶಿಗಳಾದ ಶ್ರೀ ಟುಟೇಜ್‌ರವರ ನೇತೃತ್ವದಲ್ಲಿ ಸಮಿತಿ ರಚಿಸಿದ್ದು ಸಮಿತಿಯು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು ಕೇಂದ್ರ ಸರ್ಕಾರವು ಈ ಸಂಬಂಧ ಕೆಲವು ಶಿಫಾರಸ್ಸುಗಳನ್ನು ೨೦೦೫-೦೬ ನೇ ಸಾಲಿನ ಆಯವ್ಯಯದಲ್ಲಿ ಪ್ರಕಟಿಸಿದೆ.

೧. ನಬಾರ್ಡ್ ನವರು ರಾಜ್ಯ ಸರ್ಕಾರಗಳು ರಿಜರ್ವ್‌ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರೆ ಹಣಕಾಸು ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಕಾರ್ಖಾನೆಗಳು ಪಡೆದಿರುವ ಸಾಲದ ಅಸಲು ಮತ್ತು ಬಡ್ಡಿಯನ್ನು ಎರಡು ವರ್ಷಗಳ ವಸೂಲಾತಿ ರಜೆ ನೀಡಿ ಮಧ್ಯಮಾವಧಿ, ಹಾಗೂ ದೀರ್ಘಾವಧಿ ಸಾಲವನ್ನಾಗಿ ಪರಿವರ್ತಿಸಲು ವಿಶೇಷ ಆರ್ಥಿಕ ಪ್ಯಾಕೇಜ್ ಒದಗಿಸುವುದು. ಕೇಂದ್ರ ಸರ್ಕಾರವು, ಕಾರ್ಖಾನೆಗಳು ಸಕ್ಕರೆ ಅಭಿವೃದ್ಧಿ ನಿಧಿಯಿಂದ ಪಡೆಯುವ ವಿವಿಧ ರೀತಿಯ ಸಾಲಗಳ ಮೇಲಿನ ಬಡ್ಡಿಯನ್ನು ಬ್ಯಾಂಕ್ ದರಗಳ ಬಡ್ಡಿಗಿಂತ ಶೇ. ೨ರಷ್ಟನ್ನು ಈಗಾಗಲೇ ಕಡಿಮೆ ಮಾಡಿದೆ.

ಆ) ವರದಿಯು ಸಚಿವ ಸಂಪುಟದ ಪರಿಶೀಲನೆಯಲ್ಲಿದೆ.

ಇ) ೧೬ ಸಹಕಾರ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿದೆ, ಅನುಬಂಧ ಲಗತ್ತಿಸಿದೆ.

ಈ) ಕೆಲವು ಸಕ್ಕರೆ ಕಾರ್ಖಾನೆಗಳನ್ನು ಪುನಃಶ್ಚೇತನಗೊಳಿಸಲು ಮಾನ್ಯ ಉಪ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಲಾಗಿದೆ. ಪ್ರಥಮ ಸಭೆ ದಿನಾಂಕ ೪-೭-೨೦೦೫ ರಂದು ನಡೆಯಿತು.

ANNEXURE

Name of the factory

1. Bhadra SSK Ltd
2. Bhagyalaxmi SSK Ltd.
3. Bidar SSK
4. Dakshina Kannada SSK
5. Ghataprabha SSK
6. Halasiddhanatha SSK
7. Hiranyakeshi SSK
8. Karnataka SSK
9. Malaprabha SSK
10. Pandavapura SSK
11. Raithara SSK
12. Aland SSK
13. Sri Shreerama SSK
14. Krishna SSK
15. Naranja SSK
16. Mahatma Gandhi SSI

ಳಂಂ್ (ಳಲಟಿಳ) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?